ಮೈಸೂರ್ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 3ನೇ ಡಿಸೆಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ,—1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಲ್ಪಟ್ಟ ಬೆಂಕಿಯಿಂದ ತಡೆದ ಗವರ್ನಮೆಂಟ್ ಫಾರೆಸ್ಟ್ ವ ಪ್ಲ್ಯಾಂಟೇಷನ್‌ಗಳು ಷಿಕಾರಿ ಮತ್ತು ಇತರ ಬ್ಯಾಟೆಗಳಿಗೆ 1897ನೇ ಇಸವಿ ಮೇ ಆಖೈರ್ ವರಿಗೆ ಬಂದ್ ಮಾಡಲ್ಪಟ್ಟಿರುತ್ತದೆ. ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರೀ ಫಾರೆಸ್ಟ್ ವ ಪ್ಲ್ಯಾಂಟೇಷನ್‌ಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಲಿಖಿತಮೂಲಕವಾದ ಹುಕುಂ ಪಡೆಯದೆ ಪ್ರವೇಶ ಮಾಡಕೂಡದು.

ತಾಲ್ಲೂಕು.	ಫಾರೆಸ್ಟ್ ವ ಪ್ಲ್ಯಾಂಟೇಷನ್‌ಗಳ ಹೆಸರು.
ಹುಣಸೂರು ತಾಲ್ಲೂಕು	ವೀರನಹೊಸಹಳ್ಳಿ ಫಾರೆಸ್ಟ್
	ನಾಯಿಹಳ್ಳ ಸಂದಲ್ ಪ್ಲ್ಯಾಂಟೇಷನ್
	ಗುರುಪುರ ಡಿಟೋ
	ಪಂಚವಳ್ಳಿ ಡಿಟೋ
	ದೊಡ್ಡಹರವೆ ಪ್ರೊಡಕ್ಷನ್ ಬ್ಲಾಕ್
	ಆನೇಚೌಕೂರು ಡಿಟೋ
	ವೀರನಹೊಸಹಳ್ಳಿ ಡಿಟೋ
ಹೆಗ್ಗಡದೇವನಕೋಟೆ ತಾಲ್ಲೂಕು	ಮೇಟಿಕುಪ್ಪೆ ಫಾರೆಸ್ಟ್
	ಕಾಕನಕೋಟೆ ಡಿಟೋ
	ಬೇಗೂರು ಡಿಟೋ
	ಐನೂರು ಮಾರೀಗುಡಿ ಡಿಟೋ
	ಕಾಕನಕೋಟೆ ಪ್ಲ್ಯಾಂಟೇಷನ್
	ಮಾಸ್ತಿಗುಡಿ ಡಿಟೋ
	ಮಂಚೆಗವುಡನಹಳ್ಳಿ ಡಿಟೋ
	ಹಂಪಾಪುರ ಡಿಟೋ
ಗುಂಡ್ಲು ತಾಲ್ಲೂಕು	ಬೇರಂಬಾಡಿ ಫಾರೆಸ್ಟ್
	ಭಂಡಿಪುರ ಡಿಟೋ
	ಮದ್ದೂರು ಅಳಲೇ ಪ್ಲ್ಯಾಂಟೇಷನ್
	ಹೊಂಗಹಳ್ಳಿ ಸಂದಲ್ ಪ್ಲ್ಯಾಂಟೇಷನ್
ಚಾಮರಾಜನಗರದ ತಾಲ್ಲೂಕು	ಚಾಮರಾಜನಗರದ ಫಾರೆಸ್ಟ್

ಟಿ. ಅಬ್ದುಲ್‌ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು.

ಇಸ್ತಿಹಾರ್‌ನಾಮಾ.

19ನೇ ನವಂಬರ್ ಸನ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಎಲೆಮೆಲಾಳು ಅಡಿಗೆಬೈಲ್ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸನ್ 1897ನೇ ಇಸವಿ ಜನವರಿ ತಾರೀಖು 8ನೇ ಶುಕ್ರವಾರ ಹಗಲು 11 ಘಂಟೆಗೆ ಕಡೂರು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ಕೊಪ್ಪ ತಾಲ್ಲೂಕು ಅಮಲ್‌ದಾರ್ರ ರೂಬರೂ ಹರಿಹರಪುರ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಧರಖಾಸ್ತುದಾರನಿಗೆ ಮೂರು ವಾರಗಳಂಪ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರದ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನ ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡೆದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರು ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಛಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಛಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಛಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲು ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರು ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕು ಇರಲಾರದು.

5. ಈ ನಿಬಂಧನೆಗಳಿಗೆ ಒಳಪಟ್ಟು ಹರಾಜಾದ ಜಮೀನನ್ನು ಷುರು ಮೂರು ಸಾಲ್ ಆಕಾರ ವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನ್‌ನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲೀ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಸೀಮಾ.	ದರಖಾಸ್ತು ಜಮೀನಿನ, ವಿಸ್ತೀರ್ಣ.	ದರಖಾಸ್ತು ಜಮೀನಿನ, ಆಕಾರ.	ಷರಾ.
ಅಡಿಗೆ ಬೈಲ್ 121ನೇ ಪೈಕಿ.	ಕೆರ್ಕೆಕೊಂಡ ಎಸ್ಟೇಟು ಮೆಸ್ಸರ ಸಿ. ಎಚ್. ಬ್ರೋನ್ ಸಾಹೇಬರವರು.	ಮೋಗುಂಡ ಹೋಬಳಿ ಅಡಿಗೆಬೈಲ್	ಹಾಲೀರೀ ಸರ್ವೆಯಿಂದ ಜಮೀನು ಮೇಲೆ ಹದ್ದುಬಸ್ತು ಮಾಡಿರುವಂತೆ ಬಾಂದು 6 ಕಲ್ಲು 6	100—38	100 ಅಥವಾ 150 ರೂಪಾಯಿಗಳು.	ಅಖೈರು ದರಖಾಸ್ತುದಾರನ ಖಾಯಿಷನಂತೆ ಆಕಾರ ದಾಖಲು ಮಾಡುತ್ತೆ.
ಯಲೆವಾಳಲು 33ನೇ ಪೈಕಿ.		ಎಲೆ ವಾಳಲು	ಹಾಲಿ ಸರ್ವೆಯಿಂದ ಗುರ್ತಿಸಿರುವಂತೆ ಬಾಂದು 6 ಕಲ್ಲು 6	32—2	(32 ಅಥವಾ 48)	

ತಿಳುವಳಿಕೆ ಷರಾ.—ಒಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಬ್ಜಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡೆಯುವದಕ್ಕೇ ಆಗಲಿ ಜಮೀನ್ ಹಿಡುವಳೀದಾರನು ಬದ್ಧ ವ ಅರ್ಹನಾಗಿರಬೇಕು.

ಟಿ. ವಿಯರ್,
ಡೆಪ್ಯುಟಿ ಕಮ್ಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ಇಸ್ತಿಹಾರ್‌ನಾಮೆ.

ತಾರೀಖು 1ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನ್‌ನಲ್ಲಿ ಕಂಡ ತಾಲ್ಲೂಕು ಖಜಾನೆಗಳಲ್ಲಿ ಸಂದಲ್ ತುಕಡಾಗಳು ಸ್ವಂತ ಉಪಯೋಗಕ್ಕೋಸ್ಕರ ಚಿಲ್ಲರೆಯಾಗಿ ಬಿಕರಿ ಮಾಡಲ್ಪಡುತ್ತೆ. ಇಷ್ಟವುಳ್ಳವರು ಕ್ರಯಕ್ಕೆ ಪಡೆಯಬಹುದು.

ದಾವಣಗೆರೆ, ಹೊಳಲಕೆರೆ, ಚಿತ್ರದುರ್ಗ.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್.